<u>ಪಂಚಾಯತ್ ಭವನ :-</u> ಮುಖ್ಯ ಕಟ್ಟಡದ ಎಲ್ಲಾ ಮಹಡಿಗಳ ಮೇಲ್ಚಾವಣಿ ಹಾಕಲಾಗಿದೆ. ಸಭಾ ಭವನದ 1ನೇ ಮಹಡಿಯ ಕೆಸ ಪ್ರಗತಿಯಲ್ಲಿದೆ.

<u>ಪೊಲೀಸ್ ಭವನ :-</u> ಮುಖ್ಯ ಕಟ್ಟಡದ ಎಲ್ಲಾ ಮಹಡಿಗಳ ಮೇಲ್ಚಾವಣಿ ಕೆಲಸ ಇತ್ಯಾದಿ ಕೆಲಸಗಳು ಪ್ರಗತಿಯಲ್ಲಿವೆ.

ಮೇಲಿನ ಎಲ್ಲಾ ಕಟ್ಟಡಗಳ ಗೋಡೆ ಕಟ್ಟುವುದು, ಮಡ್ಡಿ ಮಾಡುವುದು, ವಿದ್ಯುದ್ದೀಕರಣ ಕೆಲಸ ಇತ್ಯಾದಿ ಕೆಲಸಗಳು ಪ್ರಗತಿಯಲ್ಲಿವೆ.

ಇ) ಕಾಮಗಾರಿಯ ಪ್ರಗತಿಯನ್ನು ಅವಲಂಭಿಸಿ ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದು.

ಜಿಲ್ಲಾ ಸಂಕೀರ್ಣ ಕಛೇರಿಯ ಉಳಿದ ಕಾಮಗಾರಿಯನ್ನು ನವೆಂಬರ್ 2009ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕಂದಾಯ ಭವನ, ಪಂಚಾಯತ್ ಭವನ ಮತ್ತು ಪೊಲೀಸ್ ಭವನ ಕಾಮಗಾರಿಯನ್ನು ದಿನಾಂಕ: 21-01-2010ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

1108 ಶ್ರೀ ಅಮರೇಶ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳುಬಾಗಿಲು ತಾಲ್ಲೂಕಿನಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು (ವಿವರ ಒದಗಿಸುವುದು);

ಆ) ಅರಣ್ಯ ಪ್ರದೇಶದ ಭೂಮಿಯನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ; ಒತ್ತುವರಿ ಮಾಡಿ ಕೊಂಡಿರುವ ರೈತರುಗಳಿಗೆ ಸರ್ಕಾರವು ವಿಧಿಸುವ ದಂಡವೇನು;

ಇ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯಲ್ಲಿಯೇ ಜೀವನವನ್ನು ನಡೆಸುತ್ತಿರುವ ಬಡ ಕುಟುಂಬಗಳು ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮುಳುಬಾಗಿಲು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಅರಣ್ಯದ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1	ಗೋಕುಂಟೆ ಆರ್.ಎಫ್	3267.35
2	ಕಾಸೀಪುರ ಆರ್.ಎಫ್	351.00
3	ಅಗರ ಆರ್.ಎಫ್ (Part)	5052.33
	ಒಟ್ಟು	**8670.68**

ಸೆಕ್ಷನ್ 04–ಪ್ರದೇಶ

1	ಮಿಟ್ಟಹಳ್ಳಿ	77.14
2	ದುಗ್ಗಸಂದ್ರ	249.36
3	ದೊಡ್ಡಬಂಡೇಹಳ್ಳಿ	96.33
4	ಮಲ್ಲೆಕುಪ್ಪ	45.07
	ಒಟ್ಟು	**467.90**

ಆ) ಮುಳುಬಾಗಿಲು ತಾಲ್ಲೂಕಿನಲ್ಲಿ ಒಟ್ಟು 8 ಕುಟುಂಬಗಳು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಪೈಕಿ 3 ಕುಟುಂಬಗಳು ದಿನಾಂಕ: 27–04–1978ರ ನಂತರ ಒತ್ತುವರಿ ಮಾಡಿಕೊಂಡಿದ್ದು, ಅವುಗಳನ್ನು ಈಗಾಗಲೇ ತೆರವುಗೊಳಿಸಲಾಗಿದೆ. ಉಳಿದ 5 ಕುಟುಂಬಗಳು ಒಟ್ಟು 3.10 ಹೆಕ್ಟೇರ್ ಅರಣ್ಯ ಪ್ರದೇಶವನ್ನು ದಿನಾಂಕ: 27–04–1978ರ ಪೂರ್ವದಲ್ಲಿ ಒತ್ತುವರಿ ಮಾಡಿಕೊಂಡಿರುತ್ತಾರೆ.

ಇ) ಭಾರತ ಸರ್ವೋಚ್ಚ ನ್ಯಾಯಾಲಯವು 202/1995ರ ರಿಟ್ ಅರ್ಜಿ ದಾವೆಯ 703 ಐ.ಎ.ಗೆ ಸಂಬಂಧಿಸಿದಂತೆ ದಿನಾಂಕ: 3–5–2002ರ ತೀರ್ಪಿನಲ್ಲಿ ದಿನಾಂಕ: 27–4–1978ರ ನಂತರದ ಎಲ್ಲಾ ಅರಣ್ಯ ಅತಿಕ್ರಮಣವನ್ನು ತೆರವುಗೊಳಿಸುವಂತೆ ತಿಳಿಸಿದೆ. ಆದುದರಿಂದ ಈ ಅತಿಕ್ರಮದಾರರಿಗೆ ಬದಲಿ ವ್ಯವಸ್ಥೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

774 ಶ್ರೀ ಬಂಡೆಪ್ಪ ಕಾಶ್ಯಂಪೂರ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸರ್ಕಾರದ ವತಿಯಿಂದ ಉತ್ಸವಗಳನ್ನು ಆಚರಣೆ ಮಾಡಲಾಗುತ್ತಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು);